ಅ.ದಾವಾ ನಂಬರ್ 06/2021 ಪಿ.ಡಬ್ಲ್ಯೂ - 1

ದಿನಾಂಕಃ 03/04/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಹೆಚ್.ಎಸ್.ಎ. ವಕೀಲರಿಂದಃ

ಪಾಪೇಗೌಡ ನನ್ನ ಚಿಕ್ಕಪ್ಪನ ಮಗ. ಲಕ್ಕಪ್ಪಗೌಡ, ಟಿ.ಎಸ್.ರಾಜು, ಶಿವನಂಜೇಗೌಡ ಹಾಗೂ ನಾನು ಅಣ್ಣತಮ್ಮಂದಿರು. ನಾವುಗಳು 1975 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ನಾವು ಪಂಚಾಯ್ತಿ ವಿಭಾಗಪತ್ರವನ್ನು ಪಟೇಲ್ ನಂಜೇಗೌಡರವರ ಮೂಲಕ ತಯಾರು ಮಾಡಿಸಿರುತ್ತೇವೆ ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಐ.ಸಿ.ಆರ್. ನಂಬರ್ 109/1980-81 ರ ಪ್ರಕಾರ ವಿಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರವು ಹಾಳಾಗಿರುತ್ತದೆ . ಸದರಿ ವಿಭಾಗ ಪತ್ರದ ಮೂಲಕ ಖಾತೆಯಾಗಿರುತ್ತದೆ ಎಂದರೆ ಸರಿ. ನನಗೆ ಎಲ್ಲಾರಿಗಿಂತ ಹೆಚ್ಚಿಗೆ 20 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಕ್ಕಳು ಛಾಪಕಾಗದದಲ್ಲಿ ಅದಲು ಬದಲು ಮಾಡಿಕೊಳ್ಳುತ್ತೇವೆ ಎಂದು ಬರೆದುಕೊಟ್ಟಿದ್ದರು. ನಾನು ಛಾಪಕಾಗದಕ್ಕೆ ಅದಲು-ಬದಲು ಸರ್ವೆ ನಂಬರ್ ಗಾಗಿ ಸಹಿ ಮಾಡಿರುತ್ತೇನೆ ಆದರೆ ಸದರಿ ಪತ್ರವು ನೊಂದಣಿ ಕಚೇರಿಯಲ್ಲಿ ನೊಂದಣಿಯಾಗಿರುವುದಿಲ್ಲ . ಸದರಿ ಅದಲು-ಬದಲು ಪತ್ರಕ್ಕೆ ನಮ್ಮ ಗ್ರಾಮದ ಪ್ರಕಾಶ್ ಮತ್ತು ರಾಜುರವರು ಸಹಿ ಮಾಡಿರುತ್ತಾರೆ. ಸದರಿ ಪತ್ರವನ್ನು ಬರೆದವರ ಹೆಸರು ನನಗೆ ನೆನಪಿಲ್ಲ. ಸದರಿ ಪತ್ರವನ್ನು ತಾಲ್ಲೂಕು ಕಚೇರಿಯ ಹತ್ತಿರ ಬರೆದಿರುತ್ತಾರೆ. ಮಧ್ಯಾಹ್ನ 03.00 ಗಂಟೆಯಲ್ಲಿ ಬರೆದಿರುತ್ತಾರೆ, ತಿಂಗಳು ದಿನಾಂಕ ವರ್ಷ ನನಗೆ ನೆನಪಿಲ್ಲ. ಛಾಪಕಾಗದದ ಮೌಲ್ಯವು ರೂ. 20 ಆಗಿತ್ತು, ಸದರಿ ಛಾಪಕಾಗದವನ್ನು ತಾಲ್ಲೂಕು ಕಚೇರಿಯ ಪಕ್ಕದಲ್ಲಿ ಪಡೆದುಕೊಳ್ಳಲಾಗಿತ್ತು.

ಸದರಿ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಅದಲು-ಬದಲು ಮಾಡುತ್ತೇವೆ ಎಂದು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 62/2, 1 ಎಕರೆ 3 ಗುಂಟೆ ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. 2000 ಇಸವಿಯಿಂದ ಇಲ್ಲಿಯತನಕ ನನ್ನ ಹೆಂಡತಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದರಿ ಜಮೀನನ್ನು ಪ್ರಕಾಶ್ ಬಿನ್ ಶಿವಣ್ಣರವರಿಗೆ ರೂ. 3 ಲಕ್ಷಗಳಿಗೆ ಭೋಗ್ಯ ಮಾಡಲಾಗಿತ್ತು. ಸದರಿ ಭೋಗ್ಯ ಮಾಡಿದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಸದರಿ ಜಮೀನಿನ ಖಾತೆ ಪ್ರಕಾಶ್ ರವರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ್ 62/2 ರಲ್ಲಿ 25 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ಸರ್ವೆ ನಂಬರ್ 62/2 ರ ಜಮೀನಿನ ಸಂಬಂಧ ನನ್ನ ಹೆಂಡತಿಯ ಹೆಸರಿಗೆ ಯಾವುದೇ ಪಹಣಿ ಬರುತ್ತಿಲ್ಲ. ನಾನು 2000 ಇಸವಿಯಿಂದಲೂ ಸದರಿ 25 ಗುಂಟೆ ಜಮೀನಿನ ಮೇಲೆ ಬ್ಯಾಂಕಿನಿಂದ ಸಾಲವನ್ನು ಪಡೆಯುತ್ತಿದ್ದೇನೆ. ಸರ್ವೆ ನಂಬರ್ 62/1 ರಲ್ಲಿ 13 ಗುಂಟೆ ಜಮೀನು ಲಕ್ಕಪ್ಪಗೌಡನ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ಅವರು ಮೃತಪಟ್ಟ ನಂತರ ನಿಂಗಾಜಮ್ಮ ಕೋಂ ಲಕ್ಕಪ್ಪಗೌಡನ ಹೆಸರಿನಲ್ಲಿ ಬರುತ್ತದೆ

ಎಂದರೆ ಸರಿ. ಅದು 2005-06 ರಿಂದ ಬರುತ್ತಿದೆ ಎಂದರೆ ಸಾಕ್ಷಿಯು ಇತ್ತಿಚೆಗೆ ಬರುತ್ತಿದೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ